# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಬಿ.ಬಿ.ಎಂ.ಪಿ., ವ್ಯಾಪ್ತಿಯ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮಾನ್ಯ "ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ" ಯೋಜನೆಯಡಿ ನಿಗದಿಪಡಿಸಿರುವ ರೂ.80.00 ಕೋಟಿಗಳ ಅಂದಾಜು ಮೊತ್ತದ ಕಾಮಗಾರಿಗಳ ಕ್ರಿಯಾಯೋಜನೆಗೆ ಸರ್ಕಾರದ ಅನುಮೋದನೆ ನೀಡುವ ಬಗ್ಗೆ.

**ಓದಲಾಗಿದೆ:**
1. ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 15-08-2021 ರಂದು ಭಾರತದ ಸ್ವಾತಂತ್ರ್ಯೋತ್ಸವದ 75ನೇ ವರ್ಷದ ಆಚರಣೆ ಸಂದರ್ಭದಲ್ಲಿ ಮಾಡಿರುವ ಘೋಷಣೆ.
2. ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎನ್‌ವೈ 2021 (ಇ), ದಿನಾಂಕ: 14-01-2022.
3. ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎನ್‌ವೈ 2021 (ಇ), ದಿನಾಂಕ: 25-02-2022 (7).
4. ಮುಖ್ಯ ಆಯುಕ್ತರು, ಬಿಬಿಎಂಪಿ ಇವರ ಪತ್ರ ಸಂಖ್ಯೆ: ಮು.ಆ(ಯೋ.ಕೇ)/ಪಿ.ಆರ್/190/2022-23, ದಿನಾಂಕ: 04-06-2022.

* * * * *

**ಪ್ರಸ್ತಾವನೆ:**

ಮೇಲೆ ಕ್ರಮ ಸಂಖ್ಯೆ: (1) ರಲ್ಲಿ ಓದಲಾದ ದಿನಾಂಕ: 15-08-2021 ರಂದು ಭಾರತದ ಸ್ವಾತಂತ್ರ್ಯೋತ್ಸವದ 75ನೇ ವರ್ಷದ ಆಚರಣೆ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮಾಡಿರುವ ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ಬೆಂಗಳೂರು ನಗರದಲ್ಲಿ ಬಿಬಿಎಂಪಿ ಮೂಲಕ ಮುಖ್ಯ ಮೂಲಭೂತ ಸೌಕರ್ಯ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅಮೃತ ನಗರೋತ್ಥಾನ ಯೋಜನ ಅಡಿಯಲ್ಲಿ ರೂ.6000.00 ಕೋಟಿಗಳನ್ನು ಒದಗಿಸಲಾಗುವುದು ಎಂದು ಘೋಷಿಸಿರುತ್ತಾರೆ.

ಮೇಲೆ ಕ್ರಮ ಸಂಖ್ಯೆ: (2) ರಲ್ಲಿ ಓದಲಾದ ದಿನಾಂಕ: 14-01-2022ರ ಆದೇಶದಲ್ಲಿ, ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 15-08-2021 ರಂದು ಭಾರತದ ಸ್ವಾತಂತ್ರ್ಯೋತ್ಸವದ 75ನೇ ವರ್ಷದ ಸಂದರ್ಭದಲ್ಲಿ ಘೋಷಿಸಿದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದ ರೂ.6000.00 ಕೋಟಿಗಳ ಅಂದಾಜು ಮೊತ್ತದಲ್ಲಿ ಕೈಗೊಳ್ಳುವ "ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ" ಯೋಜನೆಗೆ ಸರ್ಕಾರದ ತಾತ್ವಿಕ ಅನುಮೋದನೆ ನೀಡಿ ಆದೇಶಿಸಿದೆ.

ಮೇಲೆ ಕ್ರಮ ಸಂಖ್ಯೆ: (3) ರಲ್ಲಿ ಓದಲಾದ ದಿನಾಂಕ: 25-02-2022 (7) ರ ಆದೇಶದಲ್ಲಿ, ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎನ್‌ವೈ 2021 (ಇ), ದಿನಾಂಕ: 14-01-2022 ರಂತೆ ಅನುಮೋದಿಸಲಾಗಿರುವ "ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ" ಯೋಜನೆಗೆ ಸಂಬಂಧಿಸಿದಂತೆ ಚಾಮರಾಜಪೇಟೆ ವಿಧಾನ ಸಭಾ ಕ್ಷೇತ್ರಕ್ಕೆ ರೂ.80.00 ಕೋಟಿಗಳ ಅನುದಾನವನ್ನು ನಿಗಧಿಗೊಳಿಸಿ ಆದೇಶಿಸಲಾಗಿರುತ್ತದೆ.

ಮೇಲೆ ಕ್ರಮ ಸಂಖ್ಯೆ: (4) ರಲ್ಲಿ ಓದಲಾದ ದಿನಾಂಕ: 04-06-2022 ರ ಪತ್ರದಲ್ಲಿ, ಮುಖ್ಯ ಆಯುಕ್ತರು, ಬಿಬಿಎಂಪಿ ರವರು, ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 10-08-2021 ರಂದು ನಡೆದ ಸಭೆಯಲ್ಲಿ ನಗರದ ಮೂಲಭೂತ ಸೌಕರ್ಯವನ್ನು ಪರಾಮರ್ಶಿಸಿ ಅತ್ಯಗತ್ಯ ಮುಖ್ಯ ಕಾಮಗಾರಿಗಳ ಕ್ರಿಯಾಯೋಜನೆಯನ್ನು ರೂ.6000.00 ಕೋಟಿಗಳ ಮಿತಿಯಲ್ಲಿ ತಯಾರಿಸಿ ಸರ್ಕಾರಕ್ಕೆ ಸಲ್ಲಿಸಲು ಸೂಚಿಸಿರುತ್ತಾರೆ. ಮುಂದುವರೆದು ಮಾನ್ಯ ಮುಖ್ಯಮಂತ್ರಿಗಳು ದಿನಾಂಕ: 15-08-2021 ರಂದು ಭಾರತದ ಸ್ವಾತಂತ್ರ್ಯೋತ್ಸವದ 75ನೇ ವರ್ಷದ ಸಂದರ್ಭದಲ್ಲಿ ಘೋಷಿಸಿದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದ "ಮುಖ್ಯಮಂತ್ರಿಗಳ ಅಮೃತ್ ನಗರೋತ್ಥಾನ" ಯೋಜನೆಗೆ ಸರ್ಕಾರದ ತಾತ್ವಿಕ ಅನುಮೋದನೆ ನೀಡುವ ಕುರಿತು ದಿನಾಂಕ: 06-01-2022 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ನಿರ್ಣಯಿಸಿದಂತೆ ಆದೇಶಿಸಲಾಗಿದೆ.

ಅದರಂತೆ ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎನ್‌ವೈ 2021, ದಿನಾಂಕ: 25-02-2022 (7)ರ ಆದೇಶದಲ್ಲಿ ರೂ.80.00 ಕೋಟಿಗಳನ್ನು ಚಾಮರಾಜಪೇಟೆ ವಿಧಾನ ಸಭಾ ಕ್ಷೇತ್ರಕ್ಕೆ ನಿಗದಿಪಡಿಸಿ ಆದೇಶಿಸಲಾಗಿದೆ.

ಮಾನ್ಯ "ಮುಖ್ಯ ಮಂತ್ರಿಗಳ ಅಮೃತ ನಗರೋತ್ಥಾನ" ಯೋಜನೆಯಡಿ ಚಾಮರಾಜಪೇಟೆ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ರೂ.80.00 ಕೋಟಿಗಳ ಮೊತ್ತದಲ್ಲಿ ಕೈಗೊಳ್ಳಬೇಕಾದ ಕಾಮಗಾರಿಗಳ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವಂತೆ ಮುಖ್ಯ ಆಯುಕ್ತರು, ಬಿಬಿಎಂಪಿ ರವರು ಕೋರಿರುತ್ತಾರೆ.

ಬಿಬಿಎಂಪಿ ಮುಖ್ಯ ಆಯುಕ್ತರ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ನಅಇ 297 ಎಂಎನ್‌ವೈ 2022 (ಇ),</u>**
**<u>ಬೆಂಗಳೂರು, ದಿನಾಂಕ: 08-06-2022.</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಸರ್ಕಾರದ ಆದೇಶ ಸಂಖ್ಯೆ: ನಅಇ 197 ಎಂಎನ್‌ವೈ 2021 (ಇ), ದಿನಾಂಕ: 25-02-2022 (7) ರಂತೆ "ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ" ಯೋಜನೆಯಡಿ ಚಾಮರಾಜಪೇಟೆ ವಿಧಾನ ಸಭಾ ಕ್ಷೇತ್ರಕ್ಕೆ ರೂ.80.00 ಕೋಟಿಗಳ ಅನುದಾನವನ್ನು ನಿಗದಿಗೊಳಿಸಿ ಆದೇಶಿಸಿದ್ದು, ಬಿಬಿಎಂಪಿ ಮುಖ್ಯ ಆಯುಕ್ತರ

...3/-

ಪ್ರಸ್ತಾವನೆಯಂತೆ, ಸದರಿ ರೂ.80.00 ಕೋಟಿಗಳ ಅಂದಾಜು ಮೊತ್ತದ ಈ ಕೆಳಕಂಡ ಕಾಮಗಾರಿಗಳ ಕ್ರಿಯಾಯೋಜನೆ ಪಟ್ಟಿಗೆ ಈ ಆದೇಶದಲ್ಲಿ ನಮೂದಿಸಿರುವ ಷರತ್ತುಗಳಿಗೊಳಪಟ್ಟು ಸರ್ಕಾರದ ಅನುಮೋದನೆ ನೀಡಿ ಆದೇಶಿಸಿದೆ.

| Sl No | Name of the work | Amount (Rs in Crs) |
|---|---|---|
| | **Ward No. 135- Padarayanapupra** | |
| 1 | Improvements to CC Roads, Drains, Footpaths and Improvements to Conservancies in 13th Cross road and Surrounding areas in Padarayanapura Ward No. 135 | 1.00 |
| 2 | Construction of New CC roads and drains in West of Padarayanapura and Arafat Nagar surrounding in Padarayanapura Ward No. 135 | 2.00 |
| 3 | Providing Street Lights/CCTV at Ward Jurisdiction in Ward No. 135 | 1.00 |
| | **Total** | **4.00** |
| | **Ward No. 136- JJR Nagar** | |
| 4 | Developmental works to Community Parks and Providing Gym equipment's to Gym building in Ward Jurisdiction in Ward Jurisdiction in JJR Nagar Ward No. 136 | 1.00 |
| 5 | Completion of balance works at Multipurpose building in JJR Nagar Ward No. 136 | 1.50 |
| 6 | Construction of Phase 3 of BBMP building in Sangam Circle in JJR Nagar Ward No. 136 | 1.50 |
| 7 | Improvements to Dialysis Center and Finishing balance work at Backside of Bangalore One and Other Improvement works in JJR Nagar Ward No. 136 | 0.80 |
| 8 | Providing Dialysis equipment's to Dialysis Center at Bangalore One in JJR Nagar Ward No. 136 | 1.00 |
| 9 | Improvements and finishing balance works to Muslim burial ground in Ward No. 136 | 1.00 |

| | | |
|---|---|---|
| 10 | Providing CC and Improvements of Sanitary and other works in Mominpura slum, Janata Colony and surrounding areas in JJR Nagar Ward No. 136 | 1.50 |
| 11 | Construction of CC Roads and Drains in 4th Main road, 3rd Main road, and Deva raj urs surrounding areas in JJR Nagar Ward No. 136 | 1.50 |
| 12 | Improvements to CC Roads and Drains in Hosahalli Main road, Vinayaka Nagar and Surrounding areas in JJR Nagar Ward No. 136 | 2.00 |
| 13 | Drilling, Commissioning and Maintenance of borewells and Providing water supply lines in JJR Nagar in Ward No. 136 | 1.00 |
| 14 | Providing Decorative/Ornamental Pathway Lights with poles in Parks and footpaths and energy efficient street lights, Real time street light control switches, Control wires, Poles, ABC cables and other accessories in JJR Nagar Ward No. 136 | 1.00 |
| 15 | Providing CC and Improvements of sanitary and other works in Mominpura slum, Janata Colony and surrounding areas in JJR Nagar Ward No. 136 | 2.00 |
| 16 | Providing Street Lights/CCTV at Ward Jurisdiction in Ward No. 136 | 1.00 |
| | **Total** | **16.80** |
| | | |
| | **Ward No. 137- Rayapuram** | |
| 17 | Construction of Govt. Urdu School Building at Gowripalya Rayapuram in Ward No. 137 | 1.00 |
| 18 | Construction of Samudhaya Bhavan Building at JJR Nagara Main Road, Rayapuram in Ward No. 137 | 1.00 |
| 19 | Construction of RCC drain, Culverts and footpath in Ranganatha Colony in Ward No. 137 | 1.00 |
| 20 | Construction of RCC Drain, culverts and footpath in V.S. Garden in Ward No. 137 | 1.00 |
| 21 | Construction of RCC Drain, Culverts, footpath & CC Roads to Bad Reaches in Musathafa Masjid Padarayanapura in Ward No. 137 | 0.50 |

| | | |
|---|---|---|
| 22 | Sinking of 3 Nos Borewells & Providing 1 Nos RO Plants at Ward Jurisdiction in Ward No. 137 | 0.50 |
| 23 | Providing Street Lights/CCTV at Ward Jurisdiction in Ward No. 137 | 1.00 |
| | **Total** | **6.00** |
| | **Ward No. 138- Chalavadipalya** | |
| 24 | Renovation of Govt. P.H.C at Anjanappa Garden in Ward No. 138 | 1.00 |
| 25 | Renovation of Govt. Primary School at Anjanappa Garden in Ward No. 138 | 0.50 |
| 26 | Construction of BBMP Building at Police Choki 1st & 2nd Floors Cheluvadipalya in Ward No. 138 | 1.00 |
| 27 | Construction of Govt. Urdu School Building at T.C.M Rayan Road in Ward No. 138 | 2.00 |
| 28 | Construction of RCC Drain, Culverts, Footpath & CC Roads to Bad Reaches at Siddhartha Nagar & Jaibheem Nagar in Ward No. 138 | 1.50 |
| 29 | Construction of RCC Drain, Culverts, Footpath & CC Roads to Bad Reaches at Old Pension Mohalla in Ward No. 138 | 1.00 |
| 30 | Construction of RCC Drain, culverts, footpath & CC Roads to Bad Reaches at Cheluvadipalya Main Road, Flower Garden Anjanappa Garden in Ward No. 138 | 1.00 |
| 31 | Sinking of 3 Nos Borewells & Providing 2 Nos RO Plants at Ward Jurisdiction in Ward No. 138 | 1.00 |
| 32 | Providing Street Lights/CCTV at Ward Jurisdiction in Ward No. 138 | 1.00 |
| | **Total** | **10.00** |
| | **Ward No. 139- SKR Market** | |
| 33 | Providing Equipment for Dialysis Center in Ward No. 139 | 1.00 |
| 34 | Construction of BBMP Samudhaya Bhavan Building at Bhakshi Garden, SKR Market in Ward No. 139 | 2.00 |
| 35 | Construction of BBMP Hospital Building at T.C.M. Rayan Road in Ward No. 139 | 5.00 |

. . .6/-

| | | |
|---|---|---|
| 36 | Renovation of Govt. English & Kannada Medium School and Construction of Compound Wall in Ward No. 139 | 1.20 |
| 37 | Construction of BBMP Multipurpose Building at Ranasinghpet in Ward No. 139 | 1.50 |
| 38 | Construction of RCC Drain, Culverts, Footpath & CC Roads at Police Road in Ward No. 139 | 1.50 |
| 39 | Construction of RCC Drain, Culverts, Footpath & CC Roads at Cart Stand Road in Ward No. 139 | 1.25 |
| 40 | Construction of RCC Drain, Culverts, Footpath & CC Roads at SKR Market in Ward No. 139 | 1.50 |
| 41 | Sinking of 3 Nos Borewells & Providing 2 Nos RO Plants at Ward Jurisdiction in Ward No. 139 | 1.00 |
| 42 | Providing Street Lights/CCTV at Ward Jurisdiction in Ward No. 139 | 1.00 |
| | **Total** | **16.95** |
| | | |
| | **Ward No. 140- Chamarajpet** | |
| 43 | Construction of BBMP Maternity Hospital and Bangalore One Center at Sirsi Road in Ward No. 140 | 5.00 |
| 44 | Construction of Urdu Govt. School Building at Valmikinagar 1st Main Road in Ward No. 140 | 1.50 |
| 45 | Renovation work for Existing Makkalakuta, Park Gym in Ward No. 140 | 0.40 |
| 46 | Improvements and Beautification of Park at Nanjamba Agrahara in Ward No. 140 | 1.00 |
| 47 | Errection of Puneeth Rajkumar's statue at Ward Jurisdiction in Ward No. 140 | 0.30 |
| 48 | Comprehensive Development of drain, footpath and roads at Nanjamba Agrahara and Surrounding area in Ward No. 140 | 0.60 |
| 49 | Comprehensive Development of drain, footpath and roads at Raghavendra Colony and Surrounding area in Ward No. 140 | 0.50 |

...7/-

| | | |
|---|---|---|
| 50 | Improvements to bothside drain and footpath at 4th Main road Chamarajpet from Pampamahakavi road to 3rd Cross in Ward No. 140 | 1.00 |
| 51 | Improvements to bothside drain and footpath at 9th Cross road Chamarajpet from Sirsi Circle to Hindu Rudrabhumi in Ward No. 140 | 0.70 |
| 52 | Providing Asphalt to Devanathachar Street in Ward No. 140 | 0.25 |
| 53 | Improvements to drain at Venkataramnagar Slum in Ward No. 140 | 0.50 |
| 54 | Sinking of 3 Nos Borewells & Providing 2 Nos RO Plants at Ward Jurisdiction in Ward No. 140 | 0.50 |
| 55 | Providing Street Lights/CCTV at Ward Jurisdiction in Ward No. 140 | 1.00 |
| | **Total** | **13.25** |
| | **Ward No. 141-Azadnagar** | |
| 56 | Construction of Kannada Primary Govt. School Building at Azad Nagara in Ward No. 141 | 2.00 |
| 57 | Construction of BBMP Shishu Vihara Building at Azad Nagara in Ward No. 141 | 1.50 |
| 58 | Providing Equipment for Dialysis Center in Ward No. 141 | 2.00 |
| 59 | Providing asphalt works for Valmikinagar 1st & 2nd Main Road in Ward No. 141 | 0.50 |
| 60 | Providing asphalt works for Azad Nagara, Ramachandra Agrahara Surrounding areas in Ward No. 141 | 1.00 |
| 61 | Providing asphalt works for Vittalnagara, BMK Layout, Rudrappa Garden, Ashwathkatte Main Road and Surrounding areas in Ward No. 141 | 1.00 |
| 62 | Providing asphalt works for Kasturabha nagara and Surrounding areas in Ward No. 141 | 1.00 |
| 63 | Construction of CC Roads at Kasturabhanagara, Rudrappa Garden and Surrounding areas in Ward No. 141 | 1.00 |

...8/-

| | | |
|---|---|---|
| 64 | Construction of CC Roads to Bad Reaches at Bande Slum, Jande Slum (Galli) & Dancing Galli and Surrounding areas in Ward No. 141 | 1.00 |
| 65 | Sinking of 3 Nos Borewells & Providing 2 Nos RO Plants at Ward Jurisdiction in Ward No. 141 | 1.00 |
| 66 | Providing Street Lights/CCTV at Ward Jurisdiction in Ward No. 141 | 1.00 |
| | **Total** | **13.00** |
| | **GRAND TOTAL** | **80.00** |

**ಷರತ್ತುಗಳು:**

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಚಾಮರಾಜಪೇಟೆ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ವಿವಿಧ ಮೂಲಭೂತ ಸೌಕರ್ಯ ಮತ್ತು ರಸ್ತೆಗಳ ದುರಸ್ತಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಒಟ್ಟು ರೂ.80.00 ಕೋಟಿಗಳ ಅಂದಾಜು ಮೊತ್ತದ ಕ್ರಿಯಾ ಯೋಜನೆಗೆ ಅನುಮೋದನೆ ನೀಡಿದ್ದು, ಅನುವು ಮಾಡಿರುವ ರೂ.80.00 ಕೋಟಿಗಳಿಗೆ ಮೀರಿದ ಯಾವುದೇ ವೆಚ್ಚ ಮತ್ತು ಟೆಂಡರ್ ಪ್ರೀಮಿಯಂಗಾಗಿ ಮಾಡುವ ವೆಚ್ಚವನ್ನು ಬಿಬಿಎಂಪಿಯು ತನ್ನ ಸ್ವಂತ ಅನುದಾನದಿಂದ ಭರಿಸತಕ್ಕದ್ದು. ಟೆಂಡರ್ ಪ್ರೀಮಿಯಂ ಮೊತ್ತವನ್ನು ಅಂದಾಜಿನಲ್ಲಿ ಅನುವು ಮಾಡತಕ್ಕದ್ದಲ್ಲ.
2. ಸದರಿ ಕಾಮಗಾರಿಗಳನ್ನು ರೂ.10.00 ಕೋಟಿಗಳಿಗೆ ಕಡಿಮೆ ಇರದಂತೆ ಪ್ಯಾಕೇಜ್ ಗಳನ್ನು ಮಾಡಿ, ಪ್ಯಾಕೇಜ್ ಕಾಮಗಾರಿಗಳನ್ನು ಕೆ.ಟಿ.ಪಿ.ಪಿ ಕಾಯ್ದೆ-1999 ಮತ್ತು ಕೆ.ಟಿ.ಪಿ.ಪಿ ನಿಯಮಗಳು-2000 ಹಾಗೂ e-procurement ಮುಖಾಂತರ ಕೈಗೊಂಡು, ಟೆಂಡರ್ ಗಳಿಗೆ ಸರ್ಕಾರದ ಆದೇಶ ಸಂಖ್ಯೆ: ನಅಇ 47 ಎಸ್.ಎಫ್.ಸಿ 2016, ಬೆಂಗಳೂರು, ದಿನಾಂಕ: 14-06-2016 ಮತ್ತು 03-11-2016 ರಂತೆ ಸಕ್ಷಮ ಪ್ರಾಧಿಕಾರದ ಅನುಮೋದನೆಯನ್ನು ಪಡೆದು, ಕಾಮಗಾರಿಗಳನ್ನು ಮುಂದಿನ ಎರಡು ವರ್ಷಗಳಲ್ಲಿ ಹಂತ ಹಂತವಾಗಿ ಅನುಷ್ಠಾನಗೊಳಿಸುವುದು. ಯಾವುದೇ ಕಾಮಗಾರಿಗಳನ್ನು ವಿಭಜಿಸತಕ್ಕದ್ದಲ್ಲ.
3. ಈ ಕ್ರಿಯಾ ಯೋಜನೆಯಲ್ಲಿ ಒಳಗೊಂಡಿರುವ ಕಾಮಗಾರಿಗಳು ಇತರ ಯಾವುದೇ ಯೋಜನೆ / ಅನುದಾನದಡಿಯಲ್ಲಿ ಪುನರಾವರ್ತನೆಯಾಗಿರುವುದಿಲ್ಲ ಎಂಬ ಬಗ್ಗೆ ಮುಖ್ಯ ಆಯುಕ್ತರು, ಬಿಬಿಎಂಪಿ ರವರು ಪೂರ್ವಾನ್ವಯವಾಗಿ ಖಚಿತ ಪಡಿಸಿಕೊಂಡು ಟೆಂಡರ್ ಆಹ್ವಾನಿಸತಕ್ಕದ್ದು.

...9/-

4. ಅನುಮೋದಿತ ಕ್ರಿಯಾಯೋಜನೆಯಲ್ಲಿ ಎಸ್.ಸಿ.ಎಸ್.ಪಿ / ಟಿ.ಎಸ್.ಪಿ ಕಾಯ್ದೆ ಪ್ರಕಾರ ಕಾಮಗಾರಿಗಳನ್ನು ಅಳವಡಿಸಿಕೊಂಡು ಟೆಂಡರ್ ಕರೆದು ಅನುಷ್ಠಾನಗೊಳಿಸುವುದು ಬಿಬಿಎಂಪಿಯ ಮುಖ್ಯ ಆಯುಕ್ತರ ವೈಯಕ್ತಿಕ ಜವಾಬ್ದಾರಿಯಾಗಿರುತ್ತದೆ. ಈ ಆದೇಶ ಹೊರಡಿಸಿದ ಒಂದು ತಿಂಗಳೊಳಗಾಗಿ ಬಿಬಿಎಂಪಿಯ ಮುಖ್ಯ ಆಯುಕ್ತರು ತಮ್ಮ ಹಂತದಲ್ಲಿ ಕ್ರಿಯಾ ಯೋಜನೆಯ ಕಾಮಗಾರಿಗಳನ್ನು ಎಸ್.ಸಿ.ಎಸ್.ಪಿ / ಟಿ.ಎಸ್.ಪಿ ಕಾಯ್ದೆ ಪ್ರಕಾರ ಕಾಮಗಾರಿಗಳಾಗಿ ವಿಂಗಡಿಸಿ ಆದೇಶ ಹೊರಡಿಸಿ ಸರ್ಕಾರಕ್ಕೆ ವರದಿ ಸಲ್ಲಿಸುವುದು.
5. ಕಾಮಗಾರಿಗಳ ಗುಣಮಟ್ಟದ ಬಗ್ಗೆ ಸಂಬಂಧಪಟ್ಟ ಬಿಬಿಎಂಪಿಯ ಪ್ರಧಾನ ಅಭಿಯಂತರರು ಹಾಗೂ ಸಂಬಂಧಪಟ್ಟ ಮುಖ್ಯ ಅಭಿಯಂತರರುಗಳು ನಿಗಾವಹಿಸಿ, ಉತ್ತಮ ಗುಣಮಟ್ಟದ ಆಸ್ತಿ ಸೃಜನೆಗೆ ಕಟ್ಟುನಿಟ್ಟಿನ ಕ್ರಮ ವಹಿಸತಕ್ಕದ್ದು.
6. ಮುಖ್ಯ ಆಯುಕ್ತರು, ಬಿಬಿಎಂಪಿ ರವರು ಕಾಮಗಾರಿಗಳ ಗುಣಮಟ್ಟದ ಬಗ್ಗೆ ಪ್ರತಿಷ್ಠಿತ ಸಂಸ್ಥೆಗಳಿಂದ ಗುಣಮಟ್ಟದ ತಪಾಸಣಾ ಕೈಗೊಂಡು ವರದಿಯನ್ನು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.
7. ಈ ಆದೇಶದಲ್ಲಿ ಅನುಮೋದನೆ ನೀಡಿರುವ ಕಾಮಗಾರಿಗಳ ಅನುಷ್ಠಾನ ವೇಳಾಪಟ್ಟಿಯನ್ನು ಮುಖ್ಯ ಆಯುಕ್ತರು, ಬಿಬಿಎಂಪಿ ರವರು ತಯಾರಿಸಿ, ಸರ್ಕಾರಕ್ಕೆ ಸಲ್ಲಿಸತಕ್ಕದ್ದು ಹಾಗೂ ಕಾಮಗಾರಿಗಳ ಪ್ರಗತಿ ವರದಿಯನ್ನು ಪ್ರತಿ ಮಾಹೆ ಎಂಪಿಕ್ ಸಭೆಗೆ ಸರ್ಕಾರಕ್ಕೆ ತಪ್ಪದೆ ಸಲ್ಲಿಸತಕ್ಕದ್ದು.
8. ಸರ್ಕಾರವು ಅನುಮೋದನೆ ನೀಡಿರುವ ಕಾಮಗಾರಿಗಳನ್ನು ಬದಲಾವಣೆ ಮಾಡತಕ್ಕದ್ದಲ್ಲ. ಯಾವುದಾದರೂ ಅನುಮೋದಿತ ಕಾಮಗಾರಿಯ ಅಗತ್ಯವಿಲ್ಲವೆಂದು ಆ ನಂತರದಲ್ಲಿ ತಿಳಿದುಬಂದಲ್ಲಿ ಸಂಬಂಧಪಟ್ಟ ಅಂದಾಜು ಮೊತ್ತವನ್ನು ಉಳಿತಾಯವೆಂದು ಪರಿಗಣಿಸತಕ್ಕದ್ದು.
9. ಕರ್ನಾಟಕ ಆರ್ಥಿಕ ಸಂಹಿತೆ-1958, ಸಾಧಿಲ್ವಾರು ವೆಚ್ಚ ಕೈಪಿಡಿ ಅಧಿನಿಯಮ ಹಾಗೂ ಕಾಲಕಾಲಕ್ಕೆ ಚಾಲ್ತಿಯಲ್ಲಿರುವ ಎಲ್ಲಾ ಕಾಯ್ದೆ ನಿಯಮಗಳನುಸಾರ ಕ್ರಮವಹಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಲಕ್ಷ್ಮೀಸಾಗರ್ ಎನ್.ಕೆ.)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ (ಬಿ.ಬಿ.ಎಂ.ಪಿ.)

**ಇವರಿಗೆ:**

1. ಮಹಾಲೇಖಪಾಲರು, ಲೆಕ್ಕ ತಪಾಸಣೆ/ಲೆಕ್ಕಪತ್ರ, ಕರ್ನಾಟಕ ಬೆಂಗಳೂರು.

...10/-

2. ಸರ್ಕಾರದ ಮುಖ್ಯ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಆಡಳಿತಗಾರರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಆಪ್ತ ಕಾರ್ಯದರ್ಶಿ, ಬೆಂಗಳೂರು.
6. ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
7. ಮುಖ್ಯ ಲೆಕ್ಕಾಧಿಕಾರಿಗಳು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು.
8. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು.
9. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.